ಶ್ರೀ ದಿನೇಶ್ ಗುಂಡೂರಾವ್ : ಈ ವಿಶೇಷ ಘಟಕ ಯೋಜನೆಯಡಿಯಲ್ಲಿ ಬೆಂಗಳೂರು ನಗರದಲ್ಲಿರತಕ್ಕ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನ, ಏನು ಸ್ಲಮ್ ಪ್ರದೇಶಗಳಲ್ಲಿ ಇದ್ದಾರೆ. ಈ ಕಾರ್ಯಕ್ರಮದಿಂದ ಸ್ಲಮ್‌ನ ಅಭಿವೃದ್ಧಿಗೋಸ್ಕರ ಅಥವಾ ಬೆಂಗಳೂರು ನಗರಕ್ಕೆ ಏನಾದರೊಂದು ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದಾರೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಸ್ಲಮ್ ಎಂದಾಕ್ಷಣ ಅಲ್ಲಿ ಬರೀ ಹರಿಜನ ಗಿರಿಜನರೇ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಪುರಸಭೆಯವರು ಮತ್ತು ನಗರ ಪಾಲಿಕೆಯವರು ಅನೇಕ ಸಂದರ್ಭದಲ್ಲಿ ದುರುಪಯೋಗ ಮಾಡಿಕೊಂಡಿರತಕ್ಕ ಸಂದರ್ಭಗಳೂ ಉಂಟು. ನಾನು ಇದನ್ನು ಗಮನಿಸಿದ್ದೇನೆ. ಸ್ಲಮ್ ಎಂದು ಹೇಳಿದರೆ, ಅಲ್ಲಿ ಹರಿಜನ ಗಿರಿಜನರೇ ಇರುತ್ತಾರೆಂದು 18 ಪರ್ಸೆಂಟ್ ಹಣವನ್ನು ಅಲ್ಲಿ ಖರ್ಚು ಮಾಡುವುದು? ಅದಕ್ಕಾಗಿ ಬೆಂಗಳೂರು ನಗರ ಪಾಲಿಕೆಯಲ್ಲಿ ಯಾವ ರೀತಿ ಖರ್ಚು ಮಾಡಿದ್ದಾರೆಂಬುದನ್ನು ಪರಿಶೀಲನೆ ಮಾಡುವುದಕ್ಕೆ ನಾನು ಅವರಿಗೆ ಒಂದು ವರದಿಯನ್ನೂ ಕೇಳುತ್ತಿದ್ದೇನೆ. ಒಂದು ವೇಳೆ ದುರುಪಯೋಗವಾಗಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮವನ್ನೂ ಕೈಗೊಳ್ಳುತ್ತೇನೆ. ಜೊತೆಗೆ, ಮಾನ್ಯ ಸದಸ್ಯರೂ ಕೂಡ ನಗರ ಪಾಲಿಕೆಯಲ್ಲಿ ಸದಸ್ಯರಿದ್ದಾರೆ. ಅಲ್ಲಿ ಈ ವಿಶೇಷ ಘಟಕ ಯೋಜನೆಗೆ ಇಟ್ಟಂಥ ಹಣವನ್ನು ಬಳಸುವಾಗ, ತಾವು ಸ್ವಲ್ಪ ಆಸಕ್ತಿ ವಹಿಸಿದರೆ, ದುರುಪಯೋಗವಾಗದ ರೀತಿ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದೇನೇ ಇದ್ದರೂ ನಾನು ನಗರ ಪಾಲಿಕೆಯವರ ಕಾರ್ಯಕ್ರಮಗಳೇನಿವೆ, ಅವುಗಳನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆ. ಜೋತೆಗೆ, ಬಹಳ ಹಿಂದೆ ಪುರಸಭೆಗಳು ಖರ್ಚುಮಾಡತಕ್ಕ ಸಂದರ್ಭದಲ್ಲಿ ಕೆಲವು ನಿರ್ದೇಶನಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ಬದಲಾವಣೆ ಮಾಡಬೇಕಾದ ಅಗತ್ಯವಿದೆಯೆಂಬುದು ನನಗೆ ಮನವರಿಕೆಯಾಗಿದೆ. ಅದನ್ನು ಪರಿಶೀಲನೆ ಮಾಡುವುದಕ್ಕೆ ಸದ್ಯದಲ್ಲಿಯೇ ಒಂದು ಸಭೆಯನ್ನು ಕರೆದು ಪುನರ್ ಪರಿಶೀಲನೆ ಮಾಡಿ, ಹೊಸ ಕಾರ್ಯಕ್ರಮಗಳನ್ನು ಕೊಡತಕ್ಕ ಕೆಲಸವನ್ನೂ ಕೂಡ ನಾವು ಮಾಡುತ್ತೇವೆ.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದಿಯ ವ್ಯವಹಾರ ಸಚಿವರು) : ಮಾನ್ಯ ಅಧ್ಯಕ್ಷರೇ, 26ನೇ ಪಟ್ಟಿಯಲ್ಲಿರುವ ಚುಕ್ಕೆ ಗುರುತಿಲ್ಲದ ಒಟ್ಟು 22 ಪ್ರಶ್ನೆಗಳ ಪೈಕಿ 18 ಪ್ರಶ್ನೆಗಳ ಉತ್ತರಗಳನ್ನು ಹಾಗೂ ತಡೆಹಿಡಿಯಲಾದ ಒಟ್ಟು 12 ಪ್ರಶ್ನೆಗಳ ಪೈಕಿ 3 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಮತ್ತು 25ನೇ ಪಟ್ಟಿಯಲ್ಲಿರುವ ಚುಕ್ಕೆ ಗುರುತಿನ ಒಟ್ಟು 15 ಪ್ರಶ್ನೆಗಳ ಪೈಕಿ 12 ಪ್ರಶ್ನೋತ್ತರಗಳನ್ನು ಹಾಗೂ 25ನೇ ಪಟ್ಟಿಯಲ್ಲಿರುವ ಚುಕ್ಕೆ ಗುರುತಿಲ್ಲದ ಒಟ್ಟು 47 ಪ್ರಶ್ನೆಗಳ ಪೈಕಿ 41 ಪ್ರಶ್ನೋತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ದಿನಾಂಕ 4.5.2000ದ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ

2771 (3453) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ನಿವೇಶನಗಳನ್ನು ಹಂಚಲು ಉದ್ದೇಶಿಸಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ವಿವರ ಒದಗಿಸುವುದು.

ಆ) ನಿವೇಶನಗಳನ್ನು ಯಾವಾಗ ಹಂಚಿಕೆ ಮಾಡಲಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು ಮಂಡ್ಯ ನಗರದ ಸರ್ವೆ ನಂ. 507ರ 230 ಎಕರೆ 11 ಗುಂಟೆ ಜಮೀನಿನಲ್ಲಿ ನಿವೇಶನಗಳನ್ನು ರಚಿಸಿ, ಅಭಿವೃದ್ಧಿಪಡಿಸಿ 2295 ಮಧ್ಯಂತರ ನಿವೇಶಗಳನ್ನು ಹಂಚಲು ಉದ್ದೇಶಿಸಿದ್ದು ಸಾರ್ವಜನಿಕರಿಂದ 4549 ಅರ್ಜಿಗಳು ಸ್ವೀಕೃತವಾಗಿದೆ.

ಆ) ಪ್ರಾಧಿಕಾರದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ನಗರ ವ್ಯಾಪ್ತಿಯಲ್ಲಿರುವ ಉದ್ಯಾನವನಗಳ ನಿರ್ವಹಣೆ

2772 (3454) ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ನಗರಸಭೆಗಳು ಮತ್ತು ಪುರಸಭೆಗಳು ತಮ್ಮ ವ್ಯಾಪ್ತಿಯಲ್ಲಿನ ಉದ್ಯಾನವನಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡದೇ ನಿರ್ಲಕ್ಷಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗೆಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

Functioning of Bharath Silk Filature Unit at Malavalli in Mandya

2774 (3456) Sri. M.S. Athmanada (Mandya) : Will the Minister for Sericulture and Textile. be Pleased to State

a.Is there a proposal to start Bharath Silk Filature Unit at Malavalli in Mandya District?

b.If so, what are the action is takenso far?

c.What is the stage now (Furnish Details)

Sri.M.MAHADEV (Minister for Sericulture & Textile)

a.Yes, the present name of the society. is Mahadeshwara Silk Filature Factoryand Industrial Co-operative Society Limited.

b.This Society has been sanctioned 100 basin Multiend Unit at a block cost Rs.160.00 Lakhs and now the society has re-submitted revised proposal converting itinto 60 basin unit at revised block cost of Rs.149.00 Lakhs and the same is sent to NCDC for sanction on 17-12-98.